# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 01 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1015 |
| 02 | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) |
| 03 | ಉತ್ತರಿಸುವ ದಿನಾಂಕ | : | 25.07.2024 |
| 04 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪೊಲೀಸ್ ಠಾಣೆಯ ಕಛೇರಿ ನಿರ್ವಹಣೆ ಮಾಡಲು ಎಷ್ಟು ಹಣವನ್ನು (OPS Charges) ಪ್ರತಿ ತಿಂಗಳು ನೀಡಲಾಗುತ್ತಿದೆ. ಅದನ್ನು ನಿಲ್ಲಿಸಲಾಗಿದೆಯೇ: (ತನಿಖಾ ವೆಚ್ಚ ಹೊರತುಪಡಿಸಿ) ನಿಲ್ಲಿಸಿದ್ದಲ್ಲಿ, ಪೊಲೀಸ್ ಠಾಣೆಯ ಕಛೇರಿ ನಿರ್ವಹಣೆ ಹೇಗೆ ನಡೆಯುತ್ತಿದೆ. | ಪೊಲೀಸ್ ಪ್ರಧಾನ ಕಛೇರಿ ಸುತ್ತೋಲೆ ಸಂಖ್ಯೆ:ಲೆಕ್ಕ–2/10/2017–18, ದಿನಾಂಕ:15.01.2021ರಲ್ಲಿ ಈ ಹಿಂದೆ ಹೊರಡಿಸಲಾಗಿದ್ದ ಎಲ್ಲಾ ಆದೇಶ/ಸುತ್ತೋಲೆಗಳನ್ನು ರದ್ದುಪಡಿಸಿ ಠಾಣೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಸಾದಿಲ್ವಾರು ವೆಚ್ಚವನ್ನು ನಿಗದಿಪಡಿಸಲಾಗಿರುತ್ತದೆ. |

| ಕ್ರ.ಸಂ | ಠಾಣೆಗಳ ವರ್ಗ | ಮಾಸಿಕ ಸಾದಿಲ್ವಾರು ವೆಚ್ಚದ ಸೂಚಕ ಮೊತ್ತ |
|---|---|---|
| 1. | 1 ರಿಂದ 2 ಪಿಎಸ್ಐ, ಪೊಲೀಸ್ ಠಾಣೆ/ವೃತ್ತ ಕಛೇರಿ/ಉಪ ವಿಭಾಗ ಕಛೇರಿ. | ರೂ.4,000/– |
| 2. | 4 ಪಿಎಸ್ಐ ಪೊಲೀಸ್ ಠಾಣೆ | ರೂ.6,000/– |
| 3. | 6 ಪಿಎಸ್ಐ ಪೊಲೀಸ್ ಠಾಣೆ | ರೂ.8,000/– |
| 4. | 8 ಪಿಎಸ್ಐ ಪೊಲೀಸ್ ಠಾಣೆ | ರೂ.10,000/– |
| 5 | ಇತರೆ ಪೊಲೀಸ್ ಠಾಣೆಗಳು (ರೈಲ್ವೇಸ್/ಸಂಚಾರ/ಮಹಿಳಾ/ಸಿಇಎನ್/ಸೈಬರ್/ಸಿಎಸ್‌ಪಿ/ಐಎಸ್‌ಡಿ) | ರೂ.6,000/– |

...2

<table>
<tr>
<td>ಆ)</td>
<td>ಸೈಬರ್ ಪ್ರಕರಣಗಳನ್ನು ಠಾಣಾ ಮಟ್ಟದಲ್ಲಿ ಬೇಧಿಸಲು ಠಾಣೆಗಳಿಗೆ (ಸಿ.ಇ.ಎನ್. ಠಾಣೆ ಹೊರತುಪಡಿಸಿ) ಯಾವ ಯಾವ ಉಪಕರಣಗಳನ್ನು ನೀಡಲಾಗಿದೆ:</td>
<td>ಸೈಬರ್ ಪ್ರಕರಣಗಳನ್ನು ಠಾಣಾ ಮಟ್ಟದಲ್ಲಿ ಭೇದಿಸಲು ಠಾಣೆಗಳಿಗೆ ಯಾವುದೇ ಉಪಕರಣಗಳನ್ನು ನೀಡಲಾಗಿರುವುದಿಲ್ಲ ಆದರೆ, ಸಿಸಿಪಿಎಸ್ ಠಾಣೆಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಸೈಬರ್ ಕ್ರೈಂ ವಿಭಾಗದ ಸಿ.ಎಫ್.ಯು (Cyber Forensic Unit) ವಿಭಾಗದಲ್ಲಿ ಈ ಕೆಳಕಂಡ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಉಪಕರಣಗಳನ್ನು ಸೈಬರ್ ಕ್ರೈಂ ಪ್ರಕರಣಗಳನ್ನು ಭೇದಿಸಲು ಬಳಸಿಕೊಳ್ಳಲಾಗುತ್ತಿದೆ.
<table>
<tr><th>Hardwares:</th><th>Softwares:</th></tr>
<tr><td>FRED Work Station,</td><td>Magnet AXIOM,</td></tr>
<tr><td>DATA Arrest Work Station</td><td>Belkasoft evidence center X</td></tr>
<tr><td>MAC Work Station</td><td>FTK</td></tr>
<tr><td></td><td>Encase Forensic,</td></tr>
<tr><td></td><td>Oxygen forensic detective,</td></tr>
<tr><td></td><td>UFED4PC,</td></tr>
<tr><td></td><td>Merkle science</td></tr>
</table>
</td>
</tr>
<tr>
<td>ಇ)</td>
<td>ತನಿಖಾ ವೆಚ್ಚಕ್ಕೆ ಸರ್ಕಾರ ಕಳೆದ 5 ವರ್ಷಗಳ ಅವಧಿಯಲ್ಲಿ ಎಷ್ಟು ಹಣ ನೀಡಿದೆ: ಪ್ರತಿ ಠಾಣೆಗಳಿಗೆ ಸರಾಸರಿ ಎಷ್ಟು ಹಣ ನೀಡಲಾಗಿದೆ: ಅಷ್ಟು ಹಣ ಈಗಿನ ಅಪರಾಧ ಪ್ರಮಾಣಕ್ಕೆ ಮತ್ತು ತನಿಖಾ ವೆಚ್ಚಕ್ಕೆ ಅನುಗುಣವಾಗಿದೆಯೇ:</td>
<td>ತನಿಖಾ ವೆಚ್ಚಕ್ಕೆ ಸರ್ಕಾರ ಕಳೆದ 5 ವರ್ಷಗಳ ಅವಧಿಯಲ್ಲಿ ಬಿಡುಗಡೆ ಮಾಡಲಾದ ಅನುದಾನ ಹಾಗೂ ಪ್ರತಿ ಠಾಣೆಗೆ ನೀಡಿರುವ ಸರಾಸರಿ ಅನುದಾನ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ)</th><th>ಪ್ರತಿ ಠಾಣೆಗಳಿಗೆ ನೀಡಲಾದ ಸರಾಸರಿ ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>2019–20</td><td>600.00</td><td>0.57</td></tr>
<tr><td>2020–21</td><td>1000.00</td><td>0.95</td></tr>
<tr><td>2021–22</td><td>1000.00</td><td>0.94</td></tr>
<tr><td>2022–23</td><td>1000.00</td><td>0.94</td></tr>
<tr><td>2023–24</td><td>1000.00</td><td>0.94</td></tr>
</table>
ಈಗಿನ ಅಪರಾಧ ಪ್ರಮಾಣಕ್ಕೆ ಅನುಗುಣವಾಗಿ ತನಿಖಾ ವೆಚ್ಚವನ್ನು ನೀಡಲಾಗುತ್ತಿದೆ.
</td>
</tr>
</table>

| | | |
|---|---|---|
| ಈ) | ಸೈಬರ್ ಪ್ರಕರಣಗಳಲ್ಲಿ ಹೊರ ರಾಜ್ಯಕ್ಕೆ ಹೋಗುವ ಅಧಿಕಾರಿ ಸಿಬ್ಬಂದಿಗಳಿಗೆ ಊಟ, ವಸತಿ ವ್ಯವಸ್ಥೆಗೆ ತಗಲುವ ವೆಚ್ಚ ನೀಡಲಾಗಿದೆಯೇ: ಎಷ್ಟು ಹಣವನ್ನು ಕಳೆದ 5 ವರ್ಷದಲ್ಲಿ ನೀಡಲಾಗಿದೆ: (ಜಿಲ್ಲಾವಾರು ಮಾಹಿತಿ ನೀಡುವುದು) | ಸೈಬರ್ ಪ್ರಕರಣಗಳನ್ನು ತನಿಖೆ ಮಾಡಲು ಸೆನ್ ಪೊಲೀಸ್ ಠಾಣೆಗಳು 2020 ರಿಂದ ಕಾರ್ಯಾರಂಭಗೊಂಡಿರುತ್ತವೆ. ಸೆನ್ ಪೊಲೀಸ್ ಠಾಣೆಗಳು ಪ್ರಾರಂಭವಾದಾಗಿನಿಂದ ತನಿಖೆಗಾಗಿ ಸೈಬರ್ ಪ್ರಕರಣಗಳಲ್ಲಿ ಹೊರ ರಾಜ್ಯಕ್ಕೆ ಹೋಗುವ ಅಧಿಕಾರಿ/ಸಿಬ್ಬಂದಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಆಇ 1 ಸನಿತಿ 2019, ದಿನಾಂಕ:11-01-2019ರ ರೀತ್ಯಾ ಹೋಗುವ ಸ್ಥಳವನ್ನು ಆಧರಿಸಿ ಪ್ರಯಾಣ ಭತ್ಯೆಯನ್ನು ಹಾಗೂ ದಿನ ಭತ್ಯೆ ಯನ್ನು ಪಾವತಿ ಮಾಡಲಾಗಿರುತ್ತದೆ.<br>ಜಿಲ್ಲಾವಾರು ನೀಡಿರುವ ಅನುದಾನದ ಮಾಹಿತಿ ಅನುಬಂಧದಲ್ಲಿ ನೀಡಲಾಗಿದೆ. |
| ಉ) | ಪೊಲೀಸರ ಮಾನಸಿಕ ಆರೋಗ್ಯ ಕಾಪಾಡಲು ಏನು ಕ್ರಮ ಕೈಗೊಳ್ಳಲಾಗಿದೆ: ಅವರಿಗೆ ಸರಿಯಾಗಿ ರಜೆ ಸೌಲಭ್ಯ ನೀಡಲಾಗುತ್ತಿದೆಯೇ? | ಪೊಲೀಸ್ ವೃತ್ತಿಯು ಯಾವಾಗಲೂ ಸವಾಲಿನ ಮತ್ತು ಒತ್ತಡದ ವೃತ್ತಿಯಾಗಿದೆ. ಆಘಾತಕಾರಿ ಘಟನೆಗಳಿಗೆ ಮತ್ತು ದೈನಂದಿನ ಒತ್ತಡಗಳಿಗೆ ಪೊಲೀಸ್ ಅಧಿಕಾರಿಯು ನಿರಂತರವಾಗಿ ಗುರಿಯಾಗುವುದರಿಂದ ಅವರು ತಮ್ಮ ಮನೋಸ್ಥೈರ್ಯವನ್ನು ಮತ್ತು ವ್ಯಕ್ತಿತ್ವವನ್ನು ಗಟ್ಟಿಮಾಡಿ ಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ230 ಪಿಓಪಿ 2016, ದಿನಾಂಕ: 28/12/2016 ರಲ್ಲಿ ಸಮಾಲೋಚಕರ ಹುದ್ದೆಗಳಿಗೆ ನಿಗದಿತ ಶೈಕ್ಷಣಿಕ ಅರ್ಹತೆ ಹೊಂದಿದ ವ್ಯಕ್ತಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವಂತೆ ತಿಳಿಸಿ 01-ನಿರ್ದೇಶಕರು, 09-ಹಿರಿಯ ಸಮಾಲೋಚಕರು ಮತ್ತು 50-ಸಮಾಲೋಚಕರ ಹುದ್ದೆಗಳನ್ನು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿರುತ್ತದೆ. ಪ್ರಸ್ತುತ ಸದರಿಯವರುಗಳಲ್ಲಿ 40- ಸಮಾಲೋಚಕರುಗಳು ಪೊಲೀಸ್ ಇಲಾಖೆಯ ವಿವಿಧ ಘಟಕ ಹಾಗೂ ವಿಶೇಷ ಘಟಕಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಸದರಿಯವರು ಪೊಲೀಸ್ ಇಲಾಖೆಯಲ್ಲಿನ ಸಿಬ್ಬಂದಿಗಳಿಗೆ ಮುಖ್ಯವಾಗಿ ಮಾನಸಿಕ ಮೌಲ್ಯಮಾಪನ ಮತ್ತು ಆಪ್ತ ಸಮಾಲೋಚನೆ ನಡೆಸಿ ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತಿರುತ್ತಾರೆ.<br><br>ಪೊಲೀಸ್ ಸಿಬ್ಬಂದಿಗಳಿಗೆ ನಿಯಮಾನುಸಾರ ಸಾಂದರ್ಭಿಕ ರಜೆ (ಸಿ.ಎಲ್), ಹಕ್ಕಿನಲ್ಲಿರುವ ಗಳಿಕೆ ರಜೆ/ಪರಿವರ್ತಿತ ರಜೆ ಹಾಗೂ ಕೆ.ಸಿ.ಎಸ್ ನಿಯಮಾವಳಿಯಡಿಯಲ್ಲಿ ನೀಡಲಾಗುವ ವಿಶೇಷ ಸಾಂದರ್ಭಿಕ ರಜೆಗಳನ್ನು ಮಂಜೂರು ಮಾಡಲಾಗುತ್ತಿದೆ.<br><br>ಇಲಾಖೆಯ ಪಿಸಿ ಮತ್ತು ಹೆಚ್‌ಸಿ ವೃಂದದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ವಾರದ ರಜೆ ಅಥವಾ ವಾರದ ರಜಾ ಭತ್ಯೆಯನ್ನು ಮಂಜೂರು ಮಾಡಲಾಗುತ್ತಿದೆ ಹಾಗೂ ಸಹಾಯಕ ಸಬ್-ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್, ಡಿವೈ.ಎಸ್.ಪಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳಿಗೆ ಪತ್ರಾಂಕಿತ ರಜಾ ಅನುಮತಿಯನ್ನು ನೀಡಲಾಗುತ್ತಿದೆ. |

**ಕಡತ ಸಂಖ್ಯೆ:HD/91/EFS/2024**

(ಡಾ:ಜಿ. ಪರಮೇಶ್ವರ)
ಗೃಹ ಸಚಿವರು

ಅನುಬಂಧ

ಸೈಬರ್ ಪ್ರಕರಣಗಳಲ್ಲಿ ಹೊರ ರಾಜ್ಯಕ್ಕೆ ಹೋಗುವ ಅಧಿಕಾರಿ/ಸಿಬ್ಬಂದಿಗಳಿಗೆ ಸೆನ್ ಪೊಲೀಸ್ ಠಾಣೆಗಳು ಪ್ರಾರಂಭವಾದ ದಿನದಿಂದ ಇಲ್ಲಿಯವರೆಗೆ ನೀಡಿರುವ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆ ಪಾವತಿ ಹಣದ ವಿವರದ

ಜಿಲ್ಲಾವಾರು ಮಾಹಿತಿ

| ಕ್ರ.ಸಂ. | ಕಛೇರಿ/ವಿಭಾಗ | ಮೊತ್ತ |
|---|---|---|
| 1. | ಪೊಲೀಸ್ ಆಯುಕ್ತರು, ಬೆಂಗಳೂರು ನಗರ | 80,600–00 |
| 2. | ಡಿ.ಸಿ.ಪಿ. ಪೂರ್ವ ವಿಭಾಗ | 24,750–00 |
| 3. | ಡಿ.ಸಿ.ಪಿ. ಪಶ್ಚಿಮ ವಿಭಾಗ | – |
| 4. | ಡಿ.ಸಿ.ಪಿ. ಉತ್ತರ ವಿಭಾಗ | 93,922–00 |
| 5. | ಡಿ.ಸಿ.ಪಿ. ದಕ್ಷಿಣ ವಿಭಾಗ | – |
| 6. | ಡಿ.ಸಿ.ಪಿ. ಕೇಂದ್ರ ವಿಭಾಗ | 1,78,915–00 |
| 7. | ಡಿ.ಸಿ.ಪಿ. ಆಗ್ನೇಯ ವಿಭಾಗ | – |
| 8. | ಡಿ.ಸಿ.ಪಿ. ಈಶಾನ್ಯ ವಿಭಾಗ | 18,000–00 |
| 9. | ಡಿ.ಸಿ.ಪಿ. ವೈಟ್ ಫೀಲ್ಡ್ ವಿಭಾಗ | – |
| 10. | ಪೊಲೀಸ್ ಆಯುಕ್ತರು, ಬೆಳಗಾವಿ | 4,08,097–00 |
| 11. | ಪೊಲೀಸ್ ಆಯುಕ್ತರು, ಕಲಬುರಗಿ | – |
| 12. | ಪೊಲೀಸ್ ಆಯುಕ್ತರು, ಮಂಗಳೂರು | – |
| 13. | ಪೊಲೀಸ್ ಆಯುಕ್ತರು, ಹುಬ್ಬಳ್ಳಿ–ಧಾರವಾಡ | – |
| 14. | ಪೊಲೀಸ್ ಆಯುಕ್ತರು, ಮೈಸೂರು | – |
| 15. | ಬಾಗಲಕೋಟೆ | – |
| 16. | ಬೆಳಗಾವಿ | – |
| 17. | ಬಳ್ಳಾರಿ | – |
| 18. | ಬೆಂಗಳೂರು ಗ್ರಾಮಾಂತರ | – |
| 19. | ಬೀದರ್ | – |
| 20. | ವಿಜಯಪುರ | – |
| 21. | ಚಾಮರಾಜನಗರ | 1,03,790–00 |
| 22. | ಚಿಕ್ಕಬಳ್ಳಾಪುರ | – |
| 23. | ಚಿಕ್ಕಮಗಳೂರು | – |
| 24. | ಚಿತ್ರದುರ್ಗ | 3,10,095–00 |
| 25. | ದಾವಣಗೆರೆ | 5,187–00 |
| 26. | ಧಾರವಾಡ | – |
| 27. | ಗದಗ ಜಿಲ್ಲೆ | 2,41,600–00 |

| | | |
|---|---|---|
| 28. | ಹಾಸನ ಜಿಲ್ಲೆ | – |
| 29. | ಹಾವೇರಿ ಜಿಲ್ಲೆ | – |
| 30. | ಕಲಬುರಗಿ ಜಿಲ್ಲೆ | 62,34,126–00 |
| 31. | ಕಾರವಾರ ಜಿಲ್ಲೆ | – |
| 32. | ಕೊಡಗು ಜಿಲ್ಲೆ | 9,18,000–00 |
| 33. | ಕೋಲಾರ ಜಿಲ್ಲೆ | – |
| 34. | ಕೊಪ್ಪಳ ಜಿಲ್ಲೆ | – |
| 35. | ಮಂಡ್ಯ ಜಿಲ್ಲೆ | 5,62,000–00 |
| 36. | ದಕ್ಷಿಣ ಕನ್ನಡ ಜಿಲ್ಲೆ | – |
| 37. | ಮೈಸೂರು ಜಿಲ್ಲೆ | – |
| 38. | ರಾಯಚೂರು ಜಿಲ್ಲೆ | – |
| 39. | ರಾಮನಗರ ಜಿಲ್ಲೆ | – |
| 40. | ಶಿವಮೊಗ್ಗ ಜಿಲ್ಲೆ | – |
| 41. | ತುಮಕೂರು ಜಿಲ್ಲೆ | – |
| 42. | ಉಡುಪಿ ಜಿಲ್ಲೆ | – |
| 43. | ಯಾದಗಿರಿ ಜಿಲ್ಲೆ | – |
| 44. | ವಿಜಯನಗರ ಜಿಲ್ಲೆ | – |
| 45. | ಸಿ.ಐ.ಡಿ ಘಟಕ | 9,90,135–00 |